**ದಿಃ19.12.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಕೆ.ಎಸ್.ಆರ್ ವಕೀಲರಿಂದ ಃ**

ನಾನು ಈ ಅರ್ಜಿಯಲ್ಲಿ 1ನೇ ಅರ್ಜಿದಾರಳಾಗಿದ್ದು, ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು, ಅದರಲ್ಲಿ ಪ್ರಸ್ತಾಪಿಸಿರುವ ವಿಚಾರಗಳನ್ನು ನಾನೇ ಮಾಹಿತಿ ಕೊಟ್ಟು ಬರೆಸಿರುತ್ತೇನೆ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಒಕ್ಕಣೆಯನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸತ್ಯದಿಂದ ಕೂಡಿದೆ ಎಂದು ಮತ್ತು ಅದರಲ್ಲಿ ಇರುವ ಸಹಿ ನನ್ನದಾಗಿರುತ್ತದೆ.

ನನ್ನ ಮುಖ್ಯ ವಿಚಾರಣೆಯ ಪೂರವಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡಿದ್ದು ಅದನ್ನು ನೋಡಿ ಗುರುತಿಸಿರುತ್ತೇನೆ.

1. ಪ್ರಥಮ ವರ್ತಮಾನ ವರದಿಯ ಯಥಾ ನಕಲು ನಿಪಿ.1
2. ದೂರಿನ ಯಥಾ ನಕಲು ನಿಪಿ.2
3. ಅಪರಾಧ ವಿವರ ನಮೂನೆ ಯಥಾ ನಕಲು ನಿಪಿ.3
4. ಕಚ್ಚಾನಕಾಶೆ ಯಥಾ ನಕಲು ನಿಪಿ.4
5. ವಾಹನ ತಪಾಸಣೆ ವರದಿಯ ಯಥಾ ನಕಲು ನಿಪಿ.5

6. ಶವ ಪಂಚನಾಮೆ ವರದಿಯ ಯಥಾ ನಿಪಿ.6

7. ಶವ ಪರೀಕ್ಷೆ ವರದಿಯ ಯಥಾ ನಿಪಿ.7

8. ದೋಷಾರೋಪಣಾ ಯಥಾ ನಕಲು ನಿಪಿ.8

9. ಎರಡು ನೋಟೀಸಗಳ ಯಥಾ ನಕಲು ನಿಪಿ.9 ಮತ್ತು 10

10. ವಂಶ ವೃಕ್ಷದ ದೃಢೀಕರಣ ಪತ್ರ ನಿಪಿ.11

11. ಚಾಲನೆ ಪರವಾನಿಗೆ ಪತ್ರ ನಿಪಿ.12

12. ಉದ್ದಿಮೆ ಪರವಾನಿಗೆ ಪತ್ರ ನಿಪಿ.13

13. ಇನ್ಕಮ್ ಟ್ಯಾಕ್ಸ್ ರಿಟರ್ನ್ ನಿಪಿ.14

14. 2022-2023 ರ ಇನ್ಕಮ್ ಟ್ಯಾಕ್ಸ್ ರಿಟರ್ನ್ ನ ಸ್ವೀಕೃತಿ ನಿಪಿ.15

15. ಇನ್ಕಮ್ ಟ್ಯಾಕ್ಸ್ ರಿಟರ್ನ್ ನಿಪಿ.16

16. 2023-2024 ರ ಇನ್ಕಮ್ ಟ್ಯಾಕ್ಸ್ ರಿಟರ್ನ್ ನ ಸ್ವೀಕೃತಿ ನಿಪಿ.17

17. ಇನ್ಕಮ್ ಟ್ಯಾಕ್ಸ್ ರಿಟರ್ನ್ ನಿಪಿ.18

18. 2024-2025 ರ ಇನ್ಕಮ್ ಟ್ಯಾಕ್ಸ್ ರಿಟರ್ನ್ ನ ಸ್ವೀಕೃತಿ ನಿಪಿ.19

19. ವೃತ್ತಿ ದೃಢೀಕರಣ ಪತ್ರ ನಿಪಿ.20 ಎಂದು ಗುರುತಿಸಿದ್ದೇನೆ.

ಆದ್ದರಿಂದ ನಾನು ಅರ್ಜಿಯಲ್ಲಿ ಕೋರಿದಂತೆ ಆದೇಶ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ.ಕೆ.ಡಿ.ಡಿ ವಕೀಲರಿಂದ ಃ**

ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.